International Journal of Kannada Research
www.kannadajournal.com

ISSN: 2454–5813
IJKR 2018; 4(3): 130-138
© 2018 IJKR
www.kannadajournal.com
Received: 23-05-2018
Accepted: 24-06-2018

ವಿಘ್ನೇಶ್ವರ ಭಟ್ಟ
ಸಹಾಯಕಪ್ರಾಧ್ಯಾಪಕ
ಅಮೃತವಿಶ್ವವಿದ್ಯಾಪೀಠಂ
ಮೈಸೂರು

Correspondence
ವಿಘ್ನೇಶ್ವರ ಭಟ್ಟ
ಸಹಾಯಕಪ್ರಾಧ್ಯಾಪಕ
ಅಮೃತವಿಶ್ವವಿದ್ಯಾಪೀಠಂ
ಮೈಸೂರು

# ಮೀಮಾಂಸಾಶಾಸ್ತ್ರದ ವಿಶೇಷತೆ

ವಿಘ್ನೇಶ್ವರ ಭಟ್ಟ

ಜ್ಞಾನಜ್ಯೋತಿಯಿಂದ ಜಗದ ಜಗುಲಿಯಲ್ಲಿ ಜಾಜ್ವಲಿಸುತ್ತಿರುವ ರಾಷ್ಟ್ರವೆಂದರೆ ಭಾರತ. ಋಷಿಮುನಿಗಳು ತಮ್ಮ ತಪಃ ಶಕ್ತಿಯಿಂದ ಸಾಕ್ಷಾತ್ಕರಿಸಿಕೊಂಡ ಶಾಸ್ತ್ರಗಳಿಂದ ಭಾರತವನ್ನು ಜ್ಞಾನವೆಂಬ ಬೆಳಕಿನಂಗಣವನ್ನಾಗಿಸಿದರು. ಮಹಾತ್ಮರು ವೇದವೆಂಬ ಜ್ಞಾನ ಖಜಾನೆಯನ್ನುದ್ಘಾಟಿಸಲು ಶಾಸ್ತ್ರಗಳೆಂಬ ಕೀಲಿಕೈಯನ್ನು ನಮಗಿತ್ತಿದ್ದಾರೆ. ಶಾಸ್ತ್ರಾರ್ಥವನ್ನು ಈಕೆಳಗಿನಂತೆ ವಿವರಿಸಲಾಗಿದೆ-

> ಪ್ರವೃತ್ತಿಶ್ಚ ನಿವೃತ್ತಿಶ್ಚ ಪುಂಸಾಂ ಯೇನೋಪದಿಶ್ಯತೇ |
> ತದ್ಧರ್ಮಾಶ್ಚೋಪದಿಶ್ಯಂತೇ ಶಾಸ್ತ್ರಂ ಶಾಸ್ತ್ರವಿದೋ ವಿದುಃ ||

ಧರ್ಮವನ್ನು ಪ್ರವೃತ್ತಿರೂಪ ನಿವೃತ್ತಿರೂಪ ಎಂಬ ಎರಡುವಿಧದಲ್ಲಿ ತಿಳಿಯಬಹುದು. ಯಾವುದು ಧರ್ಮಾಧರ್ಮ ಜ್ಞಾನವನ್ನು ತಿಳಿಸಿಕೊಡುವುದೋ ಅದನ್ನು ಶಾಸ್ತ್ರವೆನ್ನಬಹುದು. ಶಸ್ಯತೇ ಅನೇನ ಇತಿ ಶಾಸ್ತ್ರಂ ಎಂಬ ಅರ್ಥದಲ್ಲಿ ಶಸು ಹಿಂಸಾಯಾಂ ಎಂಬ ಧಾತುವಿಗೆ ಷ್ಟ್ರನ್ ಪ್ರತ್ಯಯವನ್ನು ಮಾಡಿದರೆ ಶಾಸ್ತ್ರಶಬ್ದ ಸಿದ್ಧಿಯಾಗುವುದು. ಶಾಸ್ತ್ರಗಳನ್ನು ಅಂಗಗಳು ಮತ್ತು ದರ್ಶನಗಳೆಂಬದಾಗಿ ವಿಭಾಗಿಸಲಾಗಿದೆ. ಅಂಗಗಳಾದರೋ ವೇದೋಚ್ಚಾರಣೆ ವೇದವಾಕ್ಯಗಳ ಸಾಮಾನ್ಯ ಜ್ಞಾನ, ಪದಗಳ ಯಥಾರ್ಥಜ್ಞಾನಗಳಲ್ಲಿ ಉಪಯುಕ್ತವಾಗುತ್ತವೆ. 'ದೃಶ್ಯತೇ ಯಥಾರ್ಥತತ್ವಮನೇನ' ಎಂಬ ವ್ಯುತ್ಪತ್ತಿಯಿಂದ ತತ್ತ್ವಾರ್ಥಸಿದ್ಧಿಗಾಗಿ ಪ್ರಮಾಣಗಳಿಂದ ವಿಷಯವನ್ನು ವಿವೇಚಿಸುವ ಶಾಸ್ತ್ರಭಾಗವನ್ನುದರ್ಶನ ವೆನ್ನುವರು. ದರ್ಶನವು ಆಸ್ತಿಕ ಮತ್ತು ನಾಸ್ತಿಕವೆಂಬ ಪ್ರಭೇದಗಳಿಂದ ಎರಡುವಿಧವಾಗಿದೆ. ವೇದಾದಿಗಳನ್ನೇ ಪ್ರಮಾಣವನ್ನಾಗಿರಿಸಿಕೊಂಡು ತತ್ತ್ವಾರ್ಥವನ್ನು ನಿರೂಪಿಸುವ ಶಾಸ್ತ್ರಭಾಗವನ್ನು ಆಸ್ತಿಕದರ್ಶನಗಳೆನ್ನಬಹುದು. ವೇದಾದಿಗಳನ್ನು ಒಪ್ಪದ ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸ್ವಮತವನ್ನು ಪ್ರತಿಪಾದಿಸುವ ದರ್ಶನವು ನಾಸ್ತಿಕದರ್ಶನವೆಂಬುದಾಗಿ ಪ್ರಸಿದ್ಧವಾಗಿದೆ. ಆಸ್ತಿಕದರ್ಶನವು ಆರುವಿಧ.

> ಮೀಮಾಂಸಾ ನ್ಯಾಯವೇದಾಂತೌ ಯೋಗೋ ವೈಶೇಷಿಕಂ ತಥಾ |
> ಸಾಂಖ್ಯಂ ಚೇತಿ ಷಡೇತಾನಿ ದರ್ಶನಾನಿ ಬುಧೈಃ ಸ್ಮೃತಂ ||

ಈ ಎಲ್ಲಾ ದರ್ಶನಗಳು ತತ್ತ್ವಾರ್ಥನಿರ್ಣಯಾಕ್ಕಾಗಿ ಋಷಿಮುನಿಗಳಿಂದ ಪ್ರತಿಪಾದಿಸಲ್ಪಟ್ಟಿವೆ. ದರ್ಶನಗಳ ಮುಖ್ಯೋದ್ದೇಶವು ವಿಭಿನ್ನವಾಗಿರುವುದರಿಂದ ಪರಸ್ಪರವಿರೋಧಗಳು ಹಲವೆಡೆ ಕಂಡುಬರುತ್ತವೆ. ದರ್ಶಗಳಲ್ಲಿ ವೇದಾರ್ಥವಿಚಾರಕ್ಕಾಗಿಯೇ ಆವಿರ್ಭೂತವಾದ ದರ್ಶನವೆಂದರೆ ಮೀಮಾಂಸಾದರ್ಶನ.

## ಮೀಮಾಂಸಾದರ್ಶನ

'ಮಾನ್ ಪೂಜಾಯಾಂ' ಧಾತುವಿಗೆ ಜಿಜ್ಞಾಸಾರ್ಥಕ 'ಸನ್' ಪ್ರತ್ಯಯದ ಯೋಗದಿಂದ ಮೀಮಾಂಸಾಶಬ್ದದ ನಿಷ್ಪತ್ತಿ ಯಾಗಿದೆ.

‘ಮೀಮಾಂಸಾ‘ ಅಂದರೆ ವಿಚಾರ ಎಂದರ್ಥ.‘ ವಿಚಾರೋ ನಾಮ ಪ್ರಮಾಣೇನ ತತ್ತ್ವಪರೀಕ್ಷಾ‘ ಎಂಬುವುದಾಗಿ ವಾಚಸ್ಪತಿಭಟ್ಟಾಚಾರ್ಯರು ವಿವರಿಸಿದ್ದಾರೆ. ಇದರಿಂದ ಪರ್ಾಮಾಣಿಕ ವಿಚಾರಶಾಸ್ತ್ರವೆಂದರೆ ಮೀಮಾಂಸಾಶಾಸ್ತ್ರವೆಂದು ಸಿದ್ಧವಾಗುತ್ತದೆ. ಅತಿಪ್ರಾಚೀನ ದರ್ಶನವೆಂದರೆ ಮೀಮಾಂಸಾದರ್ಶನವೆಂಬುವುದು ಸರ್ವಾಭಿಮತವಾದುದು. ಮೀಮಾಂಸಾದರ್ಶನವನ್ನುಮೊದಲು ವ್ಯಸ್ಥಿತ ಸೂತ್ರರುಪದಲ್ಲಿ ಪ್ರತಿಪಾದಿಸಿದವರು ಜೈಮಿನಿಮಹರ್ಷಿಗಳು. ಮೀಮಾಂಸಾ ದರ್ಶನದಲ್ಲಿ ಸುಮಾರು ೨೭೪೫ ಸೂತ್ರಗಳು ಪ್ರಸಿದ್ಧವಾಗಿವೆ. ಈ ದರ್ಶನದಲ್ಲಿ ಹನ್ನೆರಡುಅಧ್ಯಾಯಗಳಿದ್ದು ಪ್ರತಿಯೊಂದು ಅಧ್ಯಾಯದಲ್ಲೂ ವಿಶಿಷ್ಟವಿಷಯಗಳು ಪ್ರತಿಪಾದಿಸಲ್ಪಟ್ಟಿವೆ. ೬೦ ಪಾದಗಳಲ್ಲಿ ಸರಿಸುಮಾರು ಸಾವಿರ ಅಧಿಕರಣಗಳು ಪ್ರತಿಪಾದಿಸಲ್ಪಟ್ಟಿವೆ.

> ಧರ್ಮೋದ್ವಾದಶಲಕ್ಷಣ್ಯಾ ವ್ಯುತ್ಪಾದ್ಯಸ್ತ್ರಲಕ್ಷಣೈಃ |
> ಪ್ರಮಾಣಭೇದಶೇಷತ್ವ ಪ್ರಯುಕ್ತಿ ಕ್ರಮಸಂಜ್ಞಕೈಃ||
> ಅಧಿಕಾರೋತಿದೇಶಶ್ಚ ಸಾಮಾನ್ಯೇನ ವಿಶೇಷತಃ |
> ಊಹೋ ಬಾಧಶ್ಚ ತಂತ್ರಂ ಚ ಪ್ರಸಂಗಾಶ್ಚೋದಿತಾಃ ಕ್ರಮಾತ್ ||

ಪ್ರಥಮಾಧ್ಯಾಯದಲ್ಲಿ ಪ್ರಮಾಣವು, ದ್ವಿತೀಯಾಧ್ಯಾಯದಲ್ಲಿ ಕರ್ಮಭೇದಬೋಧಕಪ್ರಮಾಣಗಳು, ತೃತೀಯಾಧ್ಯಾಯದಲ್ಲಿ ಅಂಗತಾಗ್ರಾಹಕ ಪ್ರಮಾಣಗಳು, ನಾಲ್ಕನೇಯ ಅಧ್ಯಾಯದಲ್ಲಿ ಕ್ರತ್ವರ್ಥ ಪುರುಷಾರ್ಥಸ್ವರೂಪವು, ಐದನೆಯಾಧ್ಯಾಯದಲ್ಲಿ ಕ್ರಮಬೊಧಕ ಪ್ರಮಾಣಗಳು, ಆರನೆಯನೆಯ ಅಧ್ಯಾಯದಲ್ಲಿ ಅಧಿಕಾರ ಸ್ವರೂಪವು, ಏಳನೆಯ ಅಧ್ಯಾಯದಲ್ಲಿ ಸಾಮಾನ್ಯಾತಿದೇಶವು, ಎಂಟನೆಯಾಧ್ಯಾಯದಲ್ಲಿ ವಿಶೇಷಾತಿದೇಶವು, ಒಂಬತ್ತರಲ್ಲಿ ಊಹವು, ಹತ್ತನೆಯಾಧ್ಯಾಯದಲ್ಲಿ ಬಾಧವು, ಹನ್ನೊಂದರಲ್ಲಿ ತಂತ್ರವು ಹಾಗು ಹನ್ನೆರಡನೆಯ ಅಧ್ಯಾಯದಲ್ಲಿ ಪ್ರಸಂಗವು ನಿರೂಪಿಸಲ್ಪಟ್ಟಿದೆ.

ಮೀಮಾಂಸಾ ಸೂತ್ರಗಳಿಗೆ ಉಪವರ್ಷರ ವೃತ್ತಿ, ಶಬರಸ್ವಾಮಿಗಳ ಭಾಷ್ಯ ಮತ್ತು ಕುಮಾರಿಲಭಟ್ಟರ ವಾರ್ತಿಕವು ಪ್ರಸಿದ್ಧವಾದವ್ಯಾಖ್ಯೆಗಳಾಗಿವೆ. ಇದಲ್ಲದೆ ಪ್ರಭಾಕರ ಮಿಶ್ರರು ಹಾಗು ಮುರಾರಿ ಮಿಶ್ರರು ಮೀಮಾಂಸಾಶಾಸ್ತ್ರದ ಮಾರ್ಗಾಂತರ ಬೊಧಕರಾಗಿದ್ದಾರೆ. ಅದೇರೀತಿ ಪಾರ್ಥಸಾರಥಿ ಮಿಶ್ರ, ಖಂಡದೇವ ಮಿಶ್ರ, ಭರ್ತೃಮಿತ್ರ, ಅಪ್ಪಯ್ಯ ದೀಕ್ಷಿತ, ಆಪದೇವ, ಲೌಗಾಕ್ಷಿಭಾಸ್ಕರ, ಕೃಷ್ಣಯಜ್ವಾ ರಂತಹ ಪಂಡಿತರು ಅನೇಕ ಗ್ರಥಂಗಳನ್ನು ಮೀಮಾಂಸಾ ಶಾಸ್ತ್ರಾಧ್ಯಯನ ಸೌಕರ್ಯಕ್ಕಾಗಿ ವಿರಚಿಸಿದ್ದಾರೆ.

## ವಿಭಿನ್ನಶಾಸ್ತ್ರಗಳಲ್ಲಿ ಮೀಮಾಂಸಾದರ್ಶನದಪಾತ್ರ

ವಿಚಾರದಿಂದ ಹೊರತಾಗಿ ಯಾವುದೇವಿಷಯವನ್ನು ಸಮರ್ಪಕವಾಗಿ ನಿರೂಪಿಸಲು ಸಾಧ್ಯವಿಲ್ಲ. ನಿಯಮಿತ ವಿಚಾರಕ್ರಮವು ಮೀಮಾಂಸಾಶಾಸ್ತ್ರದಲ್ಲಿ ಸಮರ್ಪಕವಾಗಿ ನಿರೂಪಿಸಲ್ಪಟ್ಟಿದೆ. ಪೂರ್ವಮೀಮಾಂಸಾ ಹಾಗು ಉತ್ತರಮೀಮಾಂಸಾದರ್ಶನಗಳನಡುವೆ ಹಲವೆಡೆ ಪರಸ್ಪರವಿರೋಧಕಂಡುಬರುತ್ತದೆ. ಆದರೆ ದರ್ಶನದ ಪ್ರತಿಪಾದನಾಶೈಲಿಯಲ್ಲಿ ಸಾಮ್ಯತೆಯನ್ನು ನೋಡಬಹುದು. ನಮಗೆಲ್ಲ ತಿಳಿದಿರುವಂತೆ ಶಾರೀರಕಮೀಮಾಂಸಾ (ವೇದಾಂತ) ಭಾಷ್ಯವನ್ನು ಬರೆದವರಲ್ಲಿ ಬಗವತ್ಪಾದಶಂಕರರು ಪ್ರಸಿದ್ಧರು. ಶಂಕರರಿಂದರಚಿತವಾದ ಸೂತ್ರಭಾಷ್ಯವು ಪ್ರಾಯಃ ಶಾಬರಭಾಷ್ಯಶೈಲಿಯನ್ನೇ ಹೋಲುತ್ತದೆ.

### ಶಾಬರಭಾಷ್ಯಂ

ಧರ್ಮಃ ಪ್ರಸಿದ್ಧೋ ವಾ ಸ್ಯಾದಪ್ರಸಿದ್ಧೋ ವಾ | ಸ ಚೇತ್ಪ್ರಸಿದ್ಧೋ ನ ಜಿಜ್ಞಾಸಿತವ್ಯಃ |ಅಥಾಪ್ರಸಿದ್ಧೋ ನತರಾಂ | ಧರ್ಮಂ ಪ್ರತಿ ಹಿ ವಿಪ್ರತಿಪನ್ನಾ ಬಹುವಿದಃ | ಕೇಚಿದನ್ಯಂ ಧರ್ಮಮಾಹುಃ ಕೇಚಿದನ್ಯಂ | ಸೋ□ಯಮವಿಚಾರ್ಯ ಪ್ರವರ್ತಮಾನಃ ಕಂಚಿದೇವೋಪಾದದಾನೋ ವಿಹನ್ಯೇತ, ಅನರ್ಥಂ ಚರ್ಚ್ಛೇತ್ |

### ಶಾಂಕರಭಾಷ್ಯಂ

ತತ್ಪುನರ್ಬ್ರಹ್ಮ ಪ್ರಸಿದ್ಧಮಪ್ರಸಿದ್ಧಂ ವಾ ಸ್ಯಾತ್ | ಯದಿ ಪ್ರಸಿದ್ಧಂ ನ ಜಿಜ್ಞಾಸಿತವ್ಯಂ | ಅಥಾಪ್ರಸಿದ್ಧಂ ನೈವ ಶಕ್ಯಂ ಜಿಜ್ಞಾಸಿತುಮಿತಿ | ತದ್ವಿಶೇಷಂ ಪ್ರತಿ ವಿಪ್ರತಿಪತ್ತೇಃ | ದೇಹಮಾತ್ರಂ ಚೈತನ್ಯವಿಶಿಷ್ಟಮಾತ್ಮೇತಿ ಪ್ರಾಕೃತಾ ಜನಾ ಲೋಕಾಯತಿಕಾಶ್ಚ ಪ್ರತಿಪನ್ನಾಃ | ಮನ ಇತ್ಯನ್ಯೇ | ಏವಂ ಬಹವೋ ವಿಪ್ರತಿಪನ್ನಾ ಯುಕ್ತಿವಾಕ್ಯತದಾಭಾಸಸಮಾಶ್ರಯಾಃ ಸನ್ತಃ | ತತ್ರಾವಿಚಾರ್ಯ ಯತ್ಕಿಂಚಿತ್ಪ್ರತಿಪಾದ್ಯಮಾನೋ ನಿಃಶ್ರೇಯಸಾತ್ಪ್ರತಿಹನ್ಯೇತಾನರ್ಥಂ ಚೇಯಾತ್ |

ಮೀಮಾಂಸಾಶಾಸ್ತ್ರಪ್ರತಿಪಾದ್ಯ ವಿಷಯ ನಿರೂಪಣೋದ್ದೇಶದಿಂದ ಅಧಿಕರಣವೆಂಬ ಸುವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಈ ವ್ಯವಸ್ಥೆಯು ಉತ್ತರಮೀಮಾಂಸಾದರ್ಶದಲ್ಲಿಯೂ ಉಪಯೋಗಿಸಲ್ಪಟ್ಟಿದೆ. ಇನ್ನು ಮೀಮಾಂಸಾದರ್ಶನದಲ್ಲಿ ಹೇಗೆ ಬಲಾಬಲನಿರೂಪಣ, ಪ್ರಾಮಾಣ್ಯಾಪ್ರಾಮಾಣ್ಯನಿರ್ಣಯ, ಅಧಿಕಾರಾನಧಿಕಾರನಿರ್ಣಯಗಳು ನಿರೂಪಿಸಲ್ಪಟ್ಟಿವೆಯೋ ಅವೆಲ್ಲವು ಧರ್ಮಶಾಸ್ತ್ರದಲ್ಲಿ ಯಥಾವತ್ ಅನುವಾದಿಸಲ್ಪಟ್ಟಿವೆ. ಇನ್ನು ಪ್ರಸಿದ್ಧ ಧರ್ಮಶಾಸ್ತ್ರಕಾರರಾದ ವೀರಮಿತ್ರ ಮಿಶ್ರ, ವಿಜ್ಞಾನೇಶ್ವರ, ಹರದತ್ತದಿಗಳು ಮೀಮಾಂಸಾಶಾಸ್ತ್ರನ್ಯಾಯವನ್ನಾದರಿಸಿಯೇ ತಮ್ಮವ್ಯಾಖ್ಯೆಯನ್ನು ರಚಿಸಿರುವುದಾಗಿ ಹೇಳಿಕೊಂಡಿರುವುದನ್ನು ನಾವು ಗಮನಿಸಬಹುದು. ನ್ಯಾಯ ಮತ್ತು ಮೀಮಾಂಸಾದರ್ಶನಗಳಲ್ಲಿ ಪರಸ್ಪರವಿರೋಧಗಳು ಕಂಡುಬಂದರೂಕೂಡ ವಾಕ್ಯಶೇಷಾದಿಗಳ ನಿರೂಪಣಾ ಸಂದರ್ಭದಲ್ಲಿ ಮೀಮಾಂಸಾಶಾಸ್ತ್ರವನ್ನಾದರಿಸುವುದನ್ನು ನಾವು ಕಾಣಬಹುವುದು. ಸಹೃದಯರ ಮನತಣಿಸುವ ಸಾಹಿತ್ಯಶಾಸ್ತ್ರದಲ್ಲಿಯೂ ಮೀಮಾಂಸಾಶಾಸ್ತ್ರದ ಉಪಯುಕ್ತತೆಯನ್ನುನಾವು ಗಮನಿಸಬಹುದು. ಅನ್ವಿತಾಭಿಧಾನವಾದ ಹಾಗು ಅಭಿಹಿತಾನ್ವಯವಾದಗಳನ್ನು ಮೀಮಾಂಸಾಸಮ್ಮತವಾಗಿ ವಿಚಾರಿಸಿರುವುದನ್ನುಕಾವ್ಯಪ್ರಕಾಶ ಹಾಗು ಸಾಹಿತ್ಯದರ್ಪಣಾದಿಗ್ರಂಥಗಳುವ್ಯಕ್ತಪಡಿಸುತ್ತವೆ. ಆಕೃತಿವಾದ ಲಕ್ಷಣಾವಾದಗಳೂಕೂಡ ಮೀಮಾಂಸಾನುಸಾರವಾಗಿಯೇ ಅಲಂಕಾರಶಾಸ್ತ್ರದಲ್ಲಿ

ನಿರೂಪಿಸಲಾಗಿದೆ. ಅದಲ್ಲದೇ ಸಾಹಿತ್ಯದರ್ಪಣಾದಿ ಗ್ರಂಥಗಳಲ್ಲಿ 'ಏವಂ ಸಿದ್ಧಾಂತಯಂನ್ತಿ ಜರನ್ಮೀಮಾಂಸಕಾಃ' ಎಂಬುವುದಾಗಿ ಮೀಮಾಂಸಕರನ್ನು ಗೌರವಿಸಿಲಾಗಿದೆ. ವೇದಾಂಗಗಳಲ್ಲಿಮುಖಸ್ಥಾನೀಯವಾದ ಶಾಸ್ತ್ರ ವ್ಯಾಕರಣ. ವ್ಯಾಕರಣಶಾಸ್ತ್ರದಲ್ಲಿ ಕಾರಕಗಳಿಗೆ ಪರಸ್ಪರಾನ್ವಯಾಭಾವವನ್ನು ಪ್ರತಿಪಾದಿಸಲಾಗಿದೆ. 'ಗುಣಾನಾಂಚ ಪರಾರ್ಥತ್ವಾತ್ ಅಸಂಬನ್ಧಃ ಸಮತ್ವಾತ್ ಸ್ಯಾತ್' 'ನ ಹಿ ಭಿಕ್ಷುಕೋ ಭಿಕ್ಷುಕಾಂತರಂ ಯಾಚಿತು ಮರ್ಹತಿ ಸತ್ಯನ್ಯಸ್ಮಿನ್ನಭಿಕ್ಷುಕೆ' ಎಂಬ ಮೀಮಾಂಸಾ ನ್ಯಾಯಗಳನ್ನನುಸರಿಸಿ ಪರಸ್ಪರಾನ್ವಯವನ್ನು ನಿಷೇಧಿಸಲಾಗಿದೆ. ಹೀಗೆಯೇ ಹಲವೆಡೆ ವ್ಯಾಕರಣಶಾಸ್ತ್ರದಲ್ಲಿ ಮೀಮಾಂಸಾನ್ಯಾಯದ ಪ್ರಸಕ್ತಿಯನ್ನು ನಾವರಿಯಬಹುದು. ರಾಜಕಾರ್ಯದಲ್ಲಿ ಎಂತಃ ವ್ಯಕ್ತಿಯನ್ನು ನೇಮಿಸಬೇಕೆಂಬ ಪ್ರಶ್ನೆಗೆ 'ಯೋಯಸ್ಮಿನ್ ಸಮರ್ಥಃ ತಂ ತಸ್ಮಿನ್ನೇವ ನಿಯೋಜಯೇತ್' ಎಂಬುವುದಾಗಿ ಪ್ರಸಿದ್ಧ ಅರ್ಥಶಾಸ್ತ್ರಕಾರನಾದ ಚಾಣಕ್ಯನು ಪ್ರತಿಕ್ರಯಿಸಿದ್ದಾನೆ. ಈ ನಿಯಮವು ಮೀಮಾಂಸಾಶಾಸ್ತ್ರದ ಸಾಮರ್ಥ್ಯಾಧಿಕರಣ ನ್ಯಾಯದಿಂದನಿರೂಪಿಸಲ್ಪಟ್ಟಿದೆ. ವೇದಾರ್ಥನಿರ್ಣಯಕ್ಕಾಗಿ ಮೀಮಾಂಸಾಶಾಸ್ತ್ರದ ಉಗಮವಾಗಿರುವುದರಿಂದ, ವೇದವನ್ನಾಶ್ರಯಿಸಿರುವ ಎಲ್ಲಾಶಾಸ್ತ್ರಗಳು ಪ್ರಾಯಃ ಒಂದಲ್ಲಾ ಒಂದು ರೀತಿಯಲ್ಲಿ ಮೀಮಾಂಸಾದರ್ಶನವನ್ನು ಆಶ್ರಯಿಸಿರುವುದು ಖಂಡಿತ.

## ಆಗಮಾದಿತಂತ್ರಕರ್ಮಗಳಲ್ಲಿ ಮೀಮಾಂಸಾಶಾಸ್ತ್ರದಪಾತ್ರ

ವಿಗ್ರಹವನ್ನೊಪ್ಪದ ಮೀಮಾಂಸಾದರ್ಶನವು ಆಗಮಶಾಸ್ತ್ರದಲ್ಲಿ ಹೇಗೆ ಉಪಯುಕ್ತವಾದೀತು ಎಂಬಪ್ರಶ್ನೆಯು ಸಾಮಾನ್ಯವಾಗಿ ಮನಸ್ಸಿನಲ್ಲಿ ಮೂಡೀತು. ಯಾಗಾದಿಗಳಲ್ಲಿ ಮೀಮಾಂಸಕರು ವಿಗ್ರಹವನ್ನು ಒಪ್ಪುವುದಿಲ್ಲವೆಂಬ ಮಾತು ಹೇಗೆ ಸತ್ಯವೋ ಅದೇರೀತಿ ಧ್ಯಾನಾದಿಗಳಲ್ಲಿ ಮೀಮಾಂಸಕರು ವಿಗ್ರಹವನ್ನು ಒಪ್ಪುತ್ತಾರೆ ಎಂಬುವುದು ಸತ್ಯ. ಮೀಮಾಂಸಾಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟ ಹಲವು ನ್ಯಾಯಗಳು ಆಗಮಶಾಸ್ತ್ರದಲ್ಲಿ ಉಪಯುಕ್ತವಾಗಿವೆ. ಮೀಮಾಂಸಾಶಾಸ್ತ್ರದ ಹನ್ನೊಂದನೆಯ ಅಧ್ಯಾಯದಲ್ಲಿ ಕಾಲೈಕ್ಯ ಕರ್ತರ್ೈಕ್ಯ ದೇಶೈಕ್ಯ ಫಲೈಕ್ಯಗಳಿದ್ದಲ್ಲಿ ಹಲವಾರುಪ್ರಧಾನಯಾಗಗಳಿದ್ದರೂಕೂಡ ಒಮ್ಮೆ ಅಂಗಾನುಷ್ಠಾನ ಮಾಡಿದರೆ ಸಾಕು, ಹೊರತಾಗಿ ಪ್ರತಿಪ್ರಧಾನದಲ್ಲಿಯೂ ಪ್ರತ್ಯೇಕವಾಗಿ ಅಂಗಾನುಷ್ಠಾನವನ್ನು ಮಾಡುವಾಗತ್ಯವಿಲ್ಲ ಎಂಬುದಾಗಿಪ್ರತಿಪಾದಿಸಲಾಗಿದೆ. ಅದೇರೀತಿ ಆಗಮಶಾಸ್ತ್ರಗಳಲ್ಲಿಯೂಕೂಡ ಪ್ರತಿಷ್ಠಾಕರ್ಮಾಂಗವಾಗಿ ಅಂಕುರಾರ್ಪಣಂ, ಪುಣ್ಯಾಹವಾಚನಂ, ಭೂತೋತ್ಸರ್ಜನಂ, ಕರ್ಕರಿಸ್ಥಾಪನಂ ಹಾಗು ಶಂಖಪೂರಣಾದಿ ಕರ್ಮಗಳು ವಿಹಿತವಾಗಿವೆ. ಪ್ರತಿಷ್ಠಾಕರ್ಮದಲ್ಲಿ ಅಧಿವಾಸಹೋಮ, ಕಲಾಹೋಮ, ತತ್ವಹೋಮಗಳೆಂಬ ಅನೇಕ ಪ್ರಧಾನಕರ್ಮಗಳಿದ್ದರೂಸಹ ತಂತ್ರಾಧಿಕರಣನ್ಯಾಯದಿಂದ ಅಂಕುರಾರ್ಪಣಾದಿ ಅಂಗಕರ್ಮಗಳು ಒಮ್ಮೆಮಾತ್ರ ಅನುಷ್ಠಿಸಲ್ಪಡುತ್ತವೆ. ಇನ್ನು ದೇವಾಲಯಗಳಲ್ಲಿ ಹವಿರಾದಿದ್ರವ್ಯಗಳನ್ನು ದೇವತಾವಿಗ್ರಹಕ್ಕೆ ನಿವೇದಿಸಲಾಗುವುದು. ನಿವೇದಿತದ್ರವ್ಯವನ್ನು ಹೇಗೆ ಉಪಯೋಗಿಸಬೇಕು ಎಂಬ ಪ್ರಶ್ನೆಗೆ ಉತ್ತರವಾಗಿ ಅನುಷ್ಠಾನ ಪ್ರಕಾಶಕಾರನು ಹೀಗೆ ನುಡಿದಿದ್ದಾನೆ –

ನಿವೇದಿತಂತು ಯದ್ಭೋಜ್ಯಂ ಭೋಕ್ತವ್ಯಂ ತದ್ವಿಧಾನತಃ |

ಈ ಉಕ್ತಿಯು ಮೀಮಾಂಸಾಶಾಸ್ತ್ರದಲ್ಲಿ ಪ್ರತಿಪಾದಿಸಲ್ಪಟ್ಟ ಪ್ರತಿಪತ್ತಿನ್ಯಾಯವನ್ನಾದರಿಸಿದೆ. ಹೋಮಕ್ಕಾಗಿ ನಾಲ್ಕುಮುಷ್ಟಿದ್ರವ್ಯವನ್ನು ತೆಗೆದುಕೊಂಡು ಹವಿಸ್ಸನ್ನುಸಿದ್ಧಪಡಿಸಲಾಗುವುದು. ಸಿದ್ಧವಾದ ಹವಿಸ್ಸಿನ ಎರಡುಭಾಗಗಳು ಪ್ರಧಾನಯಾಗದಲ್ಲಿ ಉಪಯೋಗಿಸಲ್ಪಡುತ್ತವೆ. ಶೇಷಭಾಗವು ಸ್ವಿಷ್ಟಕೃತ್ ಎಂಬಹೋಮದಲ್ಲಿಯೂ ಉಳಿದಭಾಗವು ಭಕ್ಷಣದಲ್ಲಿಯೂ ಉಪಯೋಗಿಸಲ್ಪಡುವುದು. ವಿನಿಯೋಗಿಸಲ್ಪಟ್ಟ ದ್ರವ್ಯಗಳ ಉತ್ತರಕ್ರಿಯೆಯು ಪ್ರತಿಪತ್ತಿ ಪದವಾಚ್ಯವಾಗಿದೆ. ಪ್ರಕೃತ ನೈವೇದ್ಯದಲ್ಲಿ ವಿನಿಯೋಗಿಸಲ್ಪಟ್ಟ ಭೋಜ್ಯವು ನಿಯಮಯುತವಾಗಿ ಸ್ವೀಕರಿಸಬೇಕು ಎಂಬುವುದಾಗಿ ಮೇಲಿನವಾಕ್ಯವು ವಿಧಿಸುತ್ತದೆ. ಆದ್ದರಿಂದ ನಿವೇದಿತಭಕ್ಷ್ಯ ಭೋಜನವು ಪ್ರತಿಪತ್ತಿಕರ್ಮ ವೆಂಬುವುದು ಸ್ಪಷ್ಟವಾಗುತ್ತದೆ. ಹಾಗೆಯೇ ಮೀಮಾಂಸಾಶಸ್ತ್ರಪ್ರತಿಪಾದಿತ ನ್ಯಾಯಾನುಸಾರ ಅಂಗಾಂಗಿಭಾವನಿರ್ಣಯ, ಪ್ರಯೋಗಕ್ರಮನಿರ್ಣಯ ಅಧಿಕಾರನಿರ್ಣಯ, ಅತಿದೇಶನಿರ್ಣಯ ಮತ್ತು ಊಹಾನಿರ್ಣಯಾದಿಗಳನ್ನು ಆಗಮಶಾಸ್ತ್ರದಲ್ಲಿ ನಾವು ಗಮನಿಸ ಬಹುದು.

### ನ್ಯಾಯಾಲಯಗಳಲ್ಲಿ ಮೀಮಾಂಸಾ

೧೯೮೭ ರಲ್ಲಿ ಉತ್ತರಪ್ರದೇಶದ ಉಚ್ಚನ್ಯಾಯಲವು ಮೀಮಾಂಸಾಶಾಸ್ತ್ರದ ಜಟೇಷ್ಟಿ ನ್ಯಾಯವನ್ನಾದರಿಸಿ ತಿರ್ಪನ್ನು ಘೋಷಿಸಿದೆ. ಜೈಲಿನಲ್ಲಿರುವ ವ್ಯಕ್ತಿಗಳು ಜಾಮೀನನ್ನು ಪಡೆದುಕೊಳ್ಳಬೇಕಾದಲ್ಲಿ ಜಿಲ್ಲಾಹೆಚ್ಚುವರಿ ನ್ಯಾಯಾಧೀಶರಿಂದ ಅನುಮೋದಿತ ಪತ್ರದಿಂದಪಡೆಯ ಬೇಕಾಗುತ್ತದೆ. ಉತ್ತರ ಪ್ರದೇಶದ ಸರ್ಕಾರವು ಹಲವಾರು ವರ್ಷಗಳಿಂದ ಹಲವೆಡೆ ಜಿಲ್ಲಾನ್ಯಾಯಾಧೀಶರನ್ನು ನೇಮಕ ಮಾಡಿರದಕಾರಣ ಜೈಲಿನಲ್ಲಿರುವ ವ್ಯಕ್ತಿಗಳಿಗೆ ಜಾಮೀನನ್ನು ಸಲ್ಲಿಸಲು ಅವಕಾಶವೇ ದೊರಕಲಿಲ್ಲ. ಇದನ್ನು ಮನಗಂಡ ನ್ಯಾಯಾಲಯವು ತನ್ನ ಅಧಿನಿಯಮಗಳನ್ನು ಶೋಧಿಸಿತು, ಆದರೆ ಯಾವುದೇ ಪರಿಹಾರ ದೊರಕದ ಕಾರಣ ಉಪಾಯಾಂತರವನ್ನು ಶೋಧಿಸಿತು. ಅಂತಃ ಸಂದರ್ಭದಲ್ಲಿ ಮೀಮಾಂಸಾ ಶಾಸ್ತ್ರದ ಜಟೇಷ್ಟಿನ್ಯಾಯವನ್ನಾದರಿಸಿ (ಅಧ್ಯಾಯ ೬. ೩.೩೯) ನ್ಯಾಯಾಲಯವು ಜಿಲ್ಲಾನ್ಯಾಯಾಧೀಶರ ಅಭಾವದಲ್ಲಿ ನೇರವಾಗಿ ಉಚ್ಚನ್ಯಾಯಾಲಯದ ನ್ಯಾಯಾಧೀಶರು ಜಾಮೀನನ್ನು ಕೊಡಬಹುದೆಂಬುವುದಾಗಿ ನಿರ್ಣಯಿಸಿತು. ಸೋಮಲತೆಯು ಸಿಗದ ಪಕ್ಷದಲ್ಲಿ ಪೂತೀಕ ವೆಂಬ ಲತೆಯನ್ನು ಬಳಸಿ ಹೋಮಮಾಡ ಬಹುದು ಎಂಬುವುದಾಗಿ ಈ ನ್ಯಾಯವು ಪ್ರತಿಪಾದಿಸುತ್ತದೆ (ಯದಿ ಸೋಮಂ ನ ವಿಂದೇತ ಪೂತೀಕಾದಭಿಶುಣುಯಾತ್). ಈ ತೀರ್ಪನ್ನು ಹಲವರು ಒಪ್ಪಿಕಳ್ಳಲಿಲ್ಲ. ಕಾರಣ ೨೦೦೦ ಸಾವಿರವರ್ಷದಷ್ಟು ಹಳೆಯನಿಯಮಗಳು ಈ ಕಾಲಕ್ಕೆ ಅನ್ವಯವಾಗುವುದಿಲ್ಲ ಎಂಬುವುದು ಅವರ ಅಭಿಪ್ರಾಯವಾಗಿತ್ತು. ಆದರೆ

ನ್ಯಾಯಾಲಯವು ಪೂರ್ವಮೀಮಾಂಸಾ ಶಾಸ್ತ್ರವು ನ್ಯಾಯಪರೀಕ್ಷಾಶಾಸ್ತ್ರವಾಗಿರುವುದರಿಂದ ಎಷ್ಟೇ ಹಳೆಯದಾದರೂಕೂಡ ಅಂಗೀಕರಿಸಬಹುದೆಂದು ತೀರ್ಪನ್ನಿತ್ತು ಕಾನೂನನ್ನು ಜಾರಿಗೊಳಿಸಿತು. ಹೀಗೆಸುಮಾರು ೧೮೦ ತೀರ್ಪುಗಳನ್ನು ನ್ಯಾಯಾಲ್ಯಗಳು ಮೀಮಾಂಸಾಶಾಸ್ತ್ರವನ್ನಾದರಿಸಿ ನೀಡಿವೆ.

ಸಮಾಜದಲ್ಲಿಮೀಮಾಂಸಾ

ಆಧುನಿಕತೆಯ ತುತ್ತತುದಿಯನ್ನೇರುತ್ತಿದೆ ವಿಶ್ವ. ಪ್ರತಿಯೊಂದುವಿಷಯವನ್ನು ನಾವು ಅಂತರ್ಜಾಲದ ಮೂಲಕ ತಿಳಿದುಕೊಳ್ಳಬಹುದು. ಮೀಮಾಂಸಾಶಾಸ್ತ್ರವು ಲೊಕದಲ್ಲಿ ಎಷ್ಟುಉಪಯುಕ್ತವಾದದೆಂಬುದನ್ನು ತಿಳಿಯಬೇಕೆಂದರೆ ಒಮ್ಮೆ ಅಂತರ್ಜಾಲಪುಟದಲ್ಲಿ ಮೀಮಾಂಸಾದರ್ಶನಂ ಎಂಬುವುದಾಗಿ ನಮೂದಿಸಿದಲ್ಲಿ ಸರಿಸುಮಾರು ೯೧೨೦೦ ಸಂಖ್ಯೆಯ ಫಲಿತಾಂಶವನ್ನು ನಾವುಕಾಣಬಹುದು. ಇದರಿಂದ ಜಗತ್ತಿನಲ್ಲಿ ಅದೆಷ್ಟುಜನರು ಮೀಮಾಂಸಾಶಾಸ್ತ್ರವನ್ನು ಆದರಿಸುತ್ತಾರೆಂಬ ಮಾಹಿತಿಯು ನಮಗೆಲಭಿಸುತ್ತದೆ. ವಿಚಾರಶೂನ್ಯವಾದ ಜನರು ಲೋಕದಲ್ಲಿ ಉತ್ತಮಸ್ಥಾನವನ್ನು ಹೊಂದಲ್ಲು ಸಾಧ್ಯವಿಲ್ಲ. ವಿಚಾರಕ್ರಮವನ್ನು ಮೀಮಾಂಸಾಶಾಸ್ತ್ರದಿಂದ ನಾವು ಪಡೆಯಬಹುದು. ಆದ್ದರಿಂದಲೇ ಜನರು ಮೀಮಾಂಸಾಶಾಸ್ತ್ರವನ್ನರಿಯಲು ಬಯಸುತ್ತಾರೆ. ಮೀಮಾಂಸಾ ಶಾಸ್ತ್ರವು ಮಾನವಸ್ವಭಾವನ್ನರಿತು ರೂಪುಗೊಂಡಿದೆ ಎಂದರೆ ತಪ್ಪಾಗಲಾರದು. ತಿಳಿದೋ ತಿಳಿಯದೆಯೊ ಪ್ರತಿಯೊಬ್ಬನೂ ಲೊಕದಲ್ಲಿ ಮೀಮಾಂಸಕನೇ ಆಗಿದ್ದಾನೆ. ತನಗೆ ಬೇಕಾದವಸ್ತುಗಳನ್ನು ಕೊಳ್ಳುವಾಗ ವಳಿತ್ತು ಕೆಡುಕುಗಳನ್ನು ಗಮನಿಸಿಯೇ ಕೊಳ್ಳುತ್ತಾನೆ. ತನ್ನ ವಸ್ತುಗಳನ್ನು ವಿಕ್ರಯಿಸುವಾಗ ಬಹುವಿಧವಾಗಿ ವಿಕ್ರಯಯೋಗ್ಯವಸ್ತುಗಳನ್ನು ಸ್ತುತಿಸುತ್ತಾನೆ. ವಿಧಿವಾಕ್ಯಗಳನ್ನು ಕೇಳಿದತಕ್ಷಣ ಕ್ರಿಯೆಯಲ್ಲಿ ಪ್ರವೃತ್ತನಾಗುತ್ತಾನೆ. ನಿಷೇಧವಾಕ್ಯಗಳನ್ನು ಕೇಳಿದತಕ್ಷಣ ನಿವೃತ್ತನಾಗುತ್ತಾನೆ (ಪ್ರಮಾಣಾಧ್ಯಾಯ ನ್ಯಾಯ). ಕೆಲಸಕಾರ್ಯಗಳನ್ನು ಮಾಡುವಾಗ ಪ್ರಸಕ್ತ ಕಾರ್ಯಕ್ಕನುಗುಣವಾಗಿ ನಿಯಮವನ್ನಾಚರಿಸುತ್ತಾನೆ. ಉದ್ದಿಷ್ಟಕಾರ್ಯವನ್ನು ಸಾಧಿಸುವ ಉದ್ದೆಶದಿಂದ ತದಂಗವಾಗಿ ಮಾಡಲೇಬೇಕಾದ ಕಾರ್ಯಗಳನ್ನು ಚ ತು ತಪ್ಪದೆ ನೆರವೇರಿಸುತ್ತಾನೆ. (ಅಂಗಾಧ್ಯಾ ಯನ್ಯಾಯ) ಕಾರ್ಯವನ್ನು ವ್ಯವಸ್ಥಿತವಾಗಿ ಮುಗಿಸುವ ಉದ್ದೇಶದಿಂದ ಯಾವಕಾರ್ಯವಾದ ತಕ್ಷಣ ಯಾವಕಾರ್ಯವನ್ನನುಸರಿಸಬೇಕೆಂಬುದನ್ನು ತಿಳಿದು ಸುವ್ಯವಸ್ಥಿತವಾದ ಕ್ರಮವನ್ನು ರೂಪಿಸಿಕೊಳ್ಳುತ್ತಾನೆ. (ಕ್ರಮಾಧ್ಯಾಯ ನ್ಯಾಯ) ತನ್ನ ಅಧಿಕಾರವ್ಯಾಪ್ತಿಯನ್ನರಿತು ವ್ಯವಹರಿಸುತ್ತಾನೆ (ಅಧಿಕಾರಾಧ್ಯಾಯ ನ್ಯಾಯ). ಬೆರೆಯವರಿಂದ ಮಾಡಲ್ಪಟ್ಟ ಉತ್ತಮಕಾರ್ಯಗಳನ್ನು ಅನುಸರಿಸುತ್ತಾನೆ (ಅತಿದೇಶಾಧ್ಯಾಯ ನ್ಯಾಯ). ಸಮಾಜದಲ್ಲಿರುವ ಹಲವು ಉತ್ತಮಾಂಶಗಳನ್ನು ತನಗನುಕೂಲವಾಗುವಂತೇ ನಿರೂಪಿಸಿ ಕೊಳ್ಳುತ್ತಾನೆ (ಊಹಾಧ್ಯಾಯ ನ್ಯಾಯ). ತನಗೆ ಅವಶ್ಯಕತೆಯಿಲ್ಲದ ಅಂಶಗಳು ಪ್ರಾಪ್ತವಾದರೂ ಅದನ್ನುಬಯಸುವುದಿಲ್ಲ (ಬಾಧಾಧ್ಯಾಯ ನ್ಯಾಯ), ವಿಭಿನ್ನಕಾರ್ಯಗಳನ್ನು ಒಂದೇಸಲ ಮುಗಿಸುವಂತೆ ಸುಲಭೋಪಾಯವನ್ನಾದರಿಸುತ್ತಾನೆ (ತಂತ್ರಾಧ್ಯಾಯ ನ್ಯಾಯ). ಒಂದುಕಾರ್ಯ ದಿಂದ ಹಲವು ಪ್ರಯೋಜನಗಳು ಬಂದೊದಗುವುದಾದರೆ ಅಂತಃ ಕರ್ಮದಲ್ಲಿ ಶೀಘ್ರವಾಗಿ ಪ್ರವೃತ್ತನಾಗುತ್ತಾನೆ. (ಪ್ರಸಂಗಾಧ್ಯಾ ಯನ್ಯಾಯ)

ಮೀಮಾಂಸಾಶಾಸ್ತ್ರದ ಪ್ರಸಕ್ತತೆ

ಹತಂ ಜ್ಞಾನಂ ಕ್ರಿಯಾಹೀನಂ ಹತಂ ಅಜ್ಞಾನಿನಾಂ ಕ್ರಿಯಾ |
ಅಪಶ್ಯನ್ ಅಂಧಕೋದಗ್ಧಃ ಪಶ್ಯನ್ನಪಿ ಚ ಪಂಗುಕಃ ||

ಹೇಗೆ ಕಣ್ಣಿಲ್ಲದೆ ಕುರುಡನು ಕಾಲಿಲ್ಲದೆ ಕುಂಟನು ಹೊತ್ತಿ ಉರಿಯುತ್ತಿರುವ ಅರಣ್ಯದಲ್ಲಿ ಭಸ್ಮವಾಗುತ್ತಾರೋ ಅದೇರೀತಿ ಕ್ರಿಯಾಶೂನ್ಯ ಜ್ಞಾನಿಗಳೂ ಹಾಗು ಅಜ್ಞಾನಿಗಳ ಕ್ರಿಯಯೂ ಕೂಡವ್ಯರ್ಥವಾಗುತ್ತದೆ. ಸುಜ್ಞಾನದೊಂದಿಗೆ ಕ್ರಿಯೆಯನ್ನಾಚರಿಸಿ ಕ್ರಿಯಾಫಲವನ್ನನುಭವಿಸಬೇಕೆಂದರೆ ಮೀಮಾಂಸಾದರ್ಶನಾಧ್ಯಯನವು ಅತ್ಯಗತ್ಯ. ಜ್ಞಾನಕರ್ಮಸಮುಚ್ಚಯದಿಂದ ಕಾರ್ಯಸಾಧ್ಯ ಎಂಬುವುದು ಮೀಮಾಂಸಾಶಾಸ್ತ್ರದ ತತ್ವಾರ್ಥವಾಗಿದೆ. ಪ್ರತಿಯೊಂದು ದರ್ಶನವು ಕೂಡ ಒಂದಲ್ಲ ಒಂದುರೀತಿಯಲ್ಲಿ ಪ್ರಯೋಜನಕಾರಿಗಳಾಗಿವೆ. ಅದೇರಿತಿ ಮೀಮಾಂಸಾದರ್ಶನವೂಕೂಡ ಸರ್ವಾದರಣೀಯವಾಗಿದೆ.

ಪ್ರಬಂಧರಚನೆಯಲ್ಲಿ ತೆಗೆದುಕೊಂಡ ಗ್ರಂಥಗಳು


1. शाबरभाष्यसहितं मीमांसादर्शनम्
   सं-श्रीमन्महा-देव चिमणाजी आपटे
   संस्कृतम्  देवनागरी
   आनन्दाश्रम-प्रेस् १९३१

2. मीमांसा श्लोकवार्तिकम्
   कुमारिलभट्टः
   संस्कृतम्  देवनागरी
   रत्न पब्लिकेशन्स, वाराणसी २०१३

3. तन्त्रवार्तिकसहितं मीमांसादर्शनम्
   सं- विनायक गणेश आपटे
   संस्कृतम्  देवनागरी
   आनन्दाश्रम-प्रेस् १९३०

4. तन्त्रवार्तिकम्
   कुमारिलभट्टः
   संस्कृतम्  देवनागरी
   चौकाम्बा संस्कृत सीरीज, बनारस १९०३

5. टुप्टीका  कुमारिलभट्टः
   संस्कृतम्  देवनागरी
   विद्याविलास प्रेस बनारस १९०४

6. मीमांसाकौस्तुभः
खण्डदेवः
संस्कृतम् देवनागरी
चौखम्बा संस्कृत सीरीस आफिस, बनारस १९२९

7. भाट्टदीपिका
खण्डदेवः
संस्कृतम् देवनागरी
श्री सद्गुरु पब्लिकेशन्स, देहली १९८७

8. शास्त्रदीपिका
पार्थसारथि-मिश्रः
संस्कृतम् देवनागरी
चौखम्बा कृष्णदास अकाडमि वाराणसी २००३

9. भाट्टसंग्रहः
राघ्वेन्द्रयति-सार्वभौमः
संस्कृतम् देवनागरी
द्वैतवेदान्त-ष्टडीस् & रीसर्च् फौन्डेशन् बसवनगुडि, बेङ्गलूरु २००४

10. मानमेयोदयः
सं-टि. गणपति शस्त्री
संस्कृतम् देवनागरी
अनन्तशयन संस्कृत ग्रन्थावलिः १९१२

11. भाट्टनयोद्योतः
नारायणसुधी
संस्कृतम् देवनागरी
राष्ट्रिय संस्कृत संस्थानम्, २००६

12. मीमांसान्यायप्रकाशः
आपदेवः
संस्कृतम् देवनागरी
चौकाम्बा संस्कृत संस्थान, वाराणसी २००८

13. अर्थसङ्ग्रहः
लौगाक्षिभास्करः
संस्कृतम् देवनागरी
राष्ट्रिय संस्कृत संस्थान २००२

14. मीमांसापरिभाषा
कृष्णयज्वा
संस्कृतम् देवनागरी
चौखम्बा कृष्णदास अकादमी, वाराणसी २००९

15. मीमांसानयमञ्जरी
पं पट्टाभिराम शास्त्री
संस्कृतम् देवनागरी
सम्पूर्णानन्द संस्कृत युनिवर्सिटि १९८४

16. भाट्टचिन्तामणिः
श्री गागाभट्टः
संस्कृतम् देवनागरी
चौखम्बा संस्कृत सीरीज आफिस, बनारस १९३३

17. अध्वरमीमांसा कुतूहलवृत्तिः
सं- कुप्पुस्वामि शास्त्रिगल्
संस्कृतम् देवनागरी
वाणीविलास प्रेस् १९०७

18. प्रभाकरविजयः
नन्दीश्वारः
संस्कृतम् देवनागरी
संस्कृतसाहित्यपरिषत्, कलिकाता १९२६

19. प्रकरणपञ्चिका
श्री शालिकनाथः
संस्कृतम् देवनागरी
बनारस हिन्दू विश्वविद्यालयः

20. मीमांसाकोशः
केवलानन्दसरस्वती
संस्कृतम् देवनागरी
लक्ष्मणशास्त्री जोशि, तर्कतीर्थः, प्रज्ञापाठशाला, मुम्बई. १९५२

21. विधिरसायनम्
श्री अप्पय्यदीक्षितः
संस्कृतम् देवनागरी
बाबू हरिदासगुप्त, विद्याविलास यन्त्रायय: १९०१

22. जैमिनीयन्यायमाला
माधवाचार्यः
संस्कृतम् देवनागरी
कृष्णदास अकाडमि वारणासि १९८९

23. Mimamsa Sutras Of Jaimini
Translated by- Mohan Sanadal
Motilal Banarasidass Publishers Private LT
Delhi -1925

24. मीमांसाकरदीपिका
विघ्नेश्वरभट्टः
संस्कृतम् देवनागरी
यज्ञवेदिप्रतिष्ठानम् मैसूरु -२०१३

25. मीमांसा-उध्दरण-कोशः
संपादकः - श्री धन्नालाल जवहरलाल अग्रवाल
संस्कृतम् देवनागरी
तिलकमहराष्ट्रविद्यापीठ-शाखाभूत-
वैदिकसंशोधनमण्डलेन प्रकाशिता -१९८५

26. जैमिनीय-मीमांसा-भष्यम्
आचार्यशबरस्वामिविरचितम्
व्याख्याकारः- युधिष्ठिरो मीमांसकः
संस्कृतम् देवनागरी
रामलाल कपूर ट्रस्ट रेवलि (सोनिपत-हरियाणा)-
२००१

27. याज्ञवल्क्यस्मृतिः
विज्ञानेश्वरकृतमिताक्षरासंस्कृतटीका तथा
डा. गग्ङासागर राय कृत हिन्दीटीका सहिता
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत
सीरीज आफिस, बनारस

28. व्याकरणमहाभाष्यम्
कैयटविनिर्मित "प्रदीप" तथा पायुगण्डेकृत "छाया"
सहितम्
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत
सीरीज आफिस, बनारस

29. ब्रह्मसूत्रशंकरभाष्यम्
गोविन्द, वाचस्पति, आनन्दगिरि- भाष्यसहितम्
जगदीशलल शास्त्री
संस्कृतम् देवनागरी
मोतीलाल बनारसीदास वारणासी - ०५२५-५

30. श्रीमद् भागवत्पुराणम् व्यासप्रणीतम्
जगदीशलल शास्त्री
संस्कृतम् देवनागरी
मोतीलाल बनारसीदास वारणासी - ०५१४-९

31. मनुस्मृति - कूल्लूकभट्टकृत व्याख्यासहितम्
जगदीशलल शास्त्री
संस्कृतम् देवनागरी
मोतीलाल बनारसीदास वारणासी - ०७६६-२

32. तैत्तिरीयसंहिता -
भट्टभास्करमिश्रविरचितभाष्यसहितम्
सम्पादकौ - महादेव शास्त्री, के. रंगाचार्यः
संस्कृतम् देवनागरी
मोतीलाल बनारसीदास वारणासी - ०२२८-५

33. उपनिषत्संग्रहः
जगदीश शास्त्री
संस्कृतम् देवनागरी
मोतीलाल बनारसीदास वारणासी - २३२३-५

34. कात्यायनश्रौतसूत्रम्
महर्षिकात्यायनप्रणितम्, शुल्ववृत्तिसहितम्
श्रीविद्याधर शर्मा विरचित "सरला" वृत्तिसहितम्
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत
सीरीज आफिस, बनारस

35. जैमिनिसूत्रवृत्तिः
रामेश्वरसूरि विरचित "सुबोधिनी" टीकासहिता,
सम्पादकः - म.म.श्रीनित्यानन्दपर्वतीय
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत
सीरीज आफिस, बनारस

36. ताण्ड्यब्राह्मणम्
सायणाचार्य विरचित "वेदार्थप्रकाश" भाष्यसंविलितम्
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत सीरीज आफिस, बनारस

37. तैत्तिरीयसंहिता
मूलमात्रम्
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत सीरीज आफिस, बनारस

38. मैत्रायणीयसंहिता
मूलमात्रम्
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत सीरीज आफिस, बनारस

39. शुक्लयजुर्वेदीयसंहिता
मूलमात्रम्
संस्कृतम् देवनागरी
व्रजजीवनप्राच्यभारतीग्रन्थमाला चौखम्बा संस्कृत सीरीज आफिस, बनारस

40. शब्दकल्पद्रुमः
स्याररराजाराधाकान्तदेवबाहादुरप्रणीतः
संस्कृतम् देवनागरी
चौखम्बा संस्कृत सीरीज आफिस, बनारस - ५८६

41. मानमेयोदयः
नारायणस्वामि, योगीन्द्रान्दकृतभाषानुवादसहितः
संस्कृतम् देवनागरी
चौखम्बा संस्कृत सीरीज आफिस, बनारस – १५

42. शास्त्रदीपिका
विमलाहिन्दीटीकासहिता
डा. गजाननशास्त्री मुसलगांवकर
संस्कृतम् देवनागरी
चौखम्बा संस्कृत सीरीज आफिस, बनारस - ४२८

43. अथर्ववेदसंहिता
मूलमात्रम्
संस्कृतम् देवनागरी
चौखम्बा संस्कृत सीरीज आफिस, बनारस - १८

44. ऋग्वेदसंहिता
मूलमात्रम्
संस्कृतम् देवनागरी
चौखम्बा संस्कृत सीरीज आफिस, बनारस - ८४

45. काठकसंहिता
मूलमात्रम्
संस्कृतम् देवनागरी
चौखम्बा संस्कृत सीरीज आफिस, बनारस - ११५

46. मैत्रायणीयसंहिता
मूलमात्रम्
संस्कृतम् देवनागरी
चौखम्बा संस्कृत सीरीज आफिस, बनारस - ११४

47. वेदनिर्झरी - वैदिकमन्त्र, सायणभाष्य, हीन्दीव्याख्या, व्याकरणटिप्पणी सहिता
पुष्पा गुप्ता
संस्कृतम् देवनागरी
चौखम्बा संस्कृत सीरीज आफिस, बनारस – ४२७

48. शतपथब्राह्मणम्
सायणभाष्यसहितम्
संस्कृतम् देवनागरी
चौखम्बा संस्कृत सीरीज आफिस, बनारस - १७१

49. ऋग्वेदीयब्रह्मकर्मसमुच्चयः
संस्कृतम् देवनागरी
चौखम्बा संस्कृत सीरीज आफिस, बनारस - ९३

50. कुण्डमण्डपसिद्धिः
संस्कृतहिन्दीटीकासहितः
महर्षि अभयकात्यायनप्रणीतः
संस्कृतम् देवनागरी
चौखम्बा संस्कृत सीरीज आफिस, बनारस - ३९५

51. गौतमधर्मसूत्रम्
परिमार्जितहरदत्तकृतमिताक्षरव्याख्यावृत्तिसहितम्
संस्कृतम् देवनागरी
चौखम्बा संस्कृत सीरीज आफिस, बनारस - २७७

52. धर्मसिन्धुः
हिन्दीटीकासहितः, सम्पादकः -
वासुदेवलक्ष्मणशास्त्री-पणशीकरः
संस्कृतम् देवनागरी
चौखम्बा संस्कृत सीरीज आफिस, बनारस - ५०

53. निर्णयसिन्धुः
कमलाकरभट्टप्रणीतः
सम्पादकः - नारायणाचार्यः
संस्कृतम् देवनागरी
चौखम्बा संस्कृत सीरीज आफिस, बनारस – ३१

54. भगवन्तभास्करः
मीमांसकः-श्रीनीलकण्ठभट्टविरचतम्
संस्कृतम् देवनागरी
चौखम्बा संस्कृत सीरीज आफिस, बनारस - ०९

55. पाराशरस्मृतिः
सम्पादकः - पण्डितगुरुप्रसाद शर्मा
संस्कृतम् देवनागरी
चौखम्बा संस्कृत सीरीज आफिस, बनारस - ४५

56. यज्ञप्रसादः
पण्डितवेणीरामशर्माविरचितम्
संस्कृतम् देवनागरी
चौखम्बा संस्कृत सीरीज आफिस, बनारस - १०१

57. यज्ञपरिचयः
पण्डितवेणीरामशर्माविरचितम्
संस्कृतम् देवनागरी
चौखम्बा संस्कृत सीरीज आफिस, बनारस - १०४

58. यज्ञप्रवचनम्
पण्डितवेणीरामशर्माविरचितम्
संस्कृतम् देवनागरी
चौखम्बा संस्कृत सीरीज आफिस, बनारस - १०२

59. यज्ञमाहात्म्यम्
पण्डितवेणीरामशर्माविरचितम्
संस्कृतम् देवनागरी
चौखम्बा संस्कृत सीरीज आफिस, बनारस – १०३

60. यज्ञमीमांसा
पण्डितवेणीरामशर्माविरचितम्
संस्कृतम् देवनागरी
चौखम्बा संस्कृत सीरीज आफिस, बनारस - ९०

61. अभिधानचिन्तामणिः
हेमचन्द्रविरचितम्
संस्कृतम् देवनागरी
चौखम्बा संस्कृत सीरीज आफिस, बनारस - १०९

62. अमरकोशः
श्रीमदमरसिंहविरचितः
विद्वद्वरभानूजिदीक्षीतकृत "रामाश्रमी" इति व्याख्या सहिता
संस्कृतम् देवनागरी
चौखम्बा संस्कृत सीरीज आफिस, बनारस - ०१

63. वाचस्पत्यम्
तर्कवाचस्पती श्रीतारानाथभट्टाचार्येण संकलितम्
संस्कृतम् देवनागरी
चौखम्बा संस्कृत सीरीज आफिस, बनारस - ०१

64. विधिरसायनम्
सर्वतन्त्रस्वतन्त्रश्रीमदप्पयदीक्षीतविरचितः
सम्पादकः - पण्डितमुकुन्दशास्त्री
संस्कृतम् देवनागरी
चौखम्बा संस्कृत सीरीज आफिस, बनारस - १९०२

65. बृहती
प्रभाकरमिश्रप्रणीता
शाबरभाष्यव्याख्या
मद्रपुरीयविश्वविद्यालयः - १९३४

66. मीमांसादर्पण
देवुडु
कन्नडभाषा
बेङ्गलूरू प्रेस् मैसूरु रोड् बेङ्गलूरू सिटि - १९३८

67. तन्त्रवार्तिकम्
कुमारिलभट्टः
सम्पादकः आङ्ग्लानुवादकश्च - गङ्गानाथ झा
आंग्लभाषा
एस्टिक् सोसैटि कल्कत्ता - १९०५

68. ग्रन्थसम्पादना शास्त्र परिचय
सीताराम जागीर् दार्
कन्नडभाषा
श्रिसिद्दलिङ्गेश्वर बुक् डीपो - २०१२